# ರಮಣೀಯ ಅಮರನಾಥ ಯಾತ್ರೆ

ಸ್ವಾಮಿ ವೀರೇಶಾನಂದ

*ಭೂಸ್ವರ್ಗ ಕಾಶ್ಮೀರದಲ್ಲಿ ಹಿಂದೂಧಾರ್ಮಿಕ ಶ್ರದ್ಧೆಯ ಅಮರ ಪ್ರತೀಕವಾಗಿ ಮೆರೆಯುತ್ತಿರುವ ಅಮರನಾಥದ ಯಾತ್ರೆ ಮಾಡಿಕೊಂಡು ಬಂದಿರುವ, 'ವಿವೇಕಪ್ರಭ' ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ ಸ್ವಾಮಿ ವೀರೇಶಾನಂದರು ತಮ್ಮ ಯಾತ್ರೆಯ ಅನುಭವವನ್ನು ಓದುಗರೊಡನೆ ಹಂಚಿಕೊಂಡಿದ್ದಾರೆ.*

**ತಾಜ್‌ಮಹಲ್** ಅನ್ನು ಕಟ್ಟಿಸಿದ ಶಹಜಹಾನ್ ಒಮ್ಮೆ ಕಾಶ್ಮೀರಕ್ಕೆ ಹೋದ. ಅಲ್ಲಿನ ಪ್ರಕೃತಿ ಸೌಂದರ್ಯವನ್ನು ಕಂಡು ಅವನಿಗರಿಯದಂತೆಯೇ ಉದ್ಗರಿಸಿದ : "ಭೂಮಿಯ ಮೇಲೇನಾದರೂ ಸ್ವರ್ಗವಿದ್ದರೆ, ಅದು ಇದೇ, ಅದು ಇದೇ, ಅದು ಇದೇ." ನಾವು ಸರಸ್ವತಿಯನ್ನು ವಂದಿಸುವಾಗ ಕಾಶ್ಮೀರ ಪುರವಾಸಿನೀ ಎಂದು ಸಂಬೋಧಿಸುತ್ತೇವೆ. ಶೈವಸಿದ್ಧಾಂತವನ್ನು ಅಧ್ಯಯನ ಮಾಡುವವರು ಕಾಶ್ಮೀರ ಶೈವಾಗಮದ ವಿಶಿಷ್ಟತೆಯ ಬಗ್ಗೆ ಹೇಳುತ್ತಾರೆ. ಪ್ರವಾಸಿಗಳಂತೂ ಅಲ್ಲಿನ ನೈಸರ್ಗಿಕ ಮನೋಹರ ದೃಶ್ಯಕ್ಕೆ ಮಾರುಹೋಗುತ್ತಾರೆ. ಆತಂಕವಾದಿಗಳ ಕಾಟದಿಂದ ಇದರ ಪ್ರತಿಷ್ಠೆ ಈಗ ಸ್ವಲ್ಪ ಕುಂದಿದೆಯಾದರೂ ನೂರಾರು ವರ್ಷಗಳ ಇತಿಹಾಸ ಮತ್ತು ಪ್ರಸಿದ್ಧಿಯಿಂದ ಭಾರತೀಯರೆಲ್ಲರ ಮನಸ್ಸಿನಲ್ಲಿ ಕಾಶ್ಮೀರ ಮಾಸದ ಪರಿಣಾಮ ಬೀರುತ್ತಲೇ ಇದೆ.

## ಶ್ರೀನಗರದತ್ತ

ಅಂದು ಅಂದರೆ ಜುಲೈ ೭ ರಂದು ದೆಹಲಿಯಿಂದ ರಾತ್ರಿ ರೈಲಿನಲ್ಲಿ ಜಮ್ಮುವಿಗೆ ಹೊರಟೆವು. ಏನೋ ಒಂದು ಬಗೆಯ ಕಾತರ. ಆತಂಕವಾದಿಗಳ ತಾಣಕ್ಕೆ ಹೋಗುತ್ತಿರುವೆವೇನೋ ಎಂಬ ದುಗುಡ. ಬೆಳಗ್ಗೆ ಸುಮಾರು ೧೦ ಗಂಟೆಗೆ ಜಮ್ಮು ರೈಲುನಿಲ್ದಾಣ ತಲುಪಿದೆವು. ಒಡನೆಯೇ ಬಸ್ ಸ್ಟ್ಯಾಂಡಿಗೆ ಹೋಗಿ, ಶ್ರೀನಗರಕ್ಕೆ ಹೋಗುವ ಬಸ್ಸು ಹತ್ತಿದೆವು. ದಕ್ಷಿಣ ಭಾರತದಿಂದ ೬೦ಕ್ಕೂ ಹೆಚ್ಚು ಗಂಟೆಗಳ ಸುದೀರ್ಘ ಪ್ರಯಾಣ ಮಾಡಿದ ಆಯಾಸವಿತ್ತು. ಆದರೂ, ಶ್ರೀನಗರಕ್ಕೆ ಹೋಗುವ ಹೆದ್ದಾರಿಯ ಇಕ್ಕಡೆಗಳಲ್ಲಿಯೂ ಹರಡಿ, ಕಣ್ಣಿಗೆ ಇಂಪು ನೀಡುತ್ತಿದ್ದ ಪ್ರಕೃತಿಮಾತೆಯ ಸೊಬಗು ಅದನ್ನೆಲ್ಲ ನಿವಾರಿಸಿತ್ತು. ಜಮ್ಮು ನಗರದ ಬಿಸಿಲಿನ ಧಗೆಗೆ ಬೆವರಿಳಿಯುತ್ತಿದ್ದ ಮೈ, ತಂಪುಗಾಳಿ ಸೋಂಕುತ್ತಿದ್ದಂತೆಯೇ ಆರಾಮಗೊಂಡಿತು. ದೂರದ ಕಣಿವೆಯಲ್ಲಿ ವೇಗವಾಗಿ ಹರಿಯುತ್ತಿರುವ ನದಿ ಝರಿಗಳು ಒಂದು ಪಕ್ಕವಾದರೆ, ದಟ್ಟ ಕಾಡಿನಿಂದ ಕೂಡಿ ಎತ್ತರಕ್ಕೆ ಚಾಚಿರುವ ಪರ್ವತಶ್ರೇಣಿ ಮತ್ತೊಂದೆಡೆ. ದಾರಿಯುದ್ದಕ್ಕೂ, ಪ್ರತಿ ಮೈಲಿಗೂ ಇರುವ ಸೈನಿಕರ ಕಾವಲು ಮಾತ್ರ ಆ ಪ್ರದೇಶದ ಕರಾಳ ವಾಸ್ತವವನ್ನು ನೆನಪಿಗೆ ತರುತ್ತಿತ್ತು. ಇಲ್ಲವೆಂದರೆ, ಶಹಜಹಾನ್ ಹೇಳಿದಂತೆ ಸ್ವರ್ಗವೇ ಅಲ್ಲಿ ಮೈತಳೆದಿತ್ತು.

ಸಾಯಂಕಾಲದ ಹೊತ್ತಿಗೆ ಜವಹರ್ ಸುರಂಗವನ್ನು ತಲುಪಿದೆವು. ಅದು ಜಮ್ಮು ಪ್ರದೇಶಕ್ಕೆ ಕಾಶ್ಮೀರ ಕಣಿವೆಯನ್ನು ಸೇರಿಸುವ ಕೊಂಡಿ. ಕಟ್ಟುನಿಟ್ಟಿನ ಭದ್ರತಾ ಪರೀಕ್ಷೆಯ ನಂತರ ನಮ್ಮ ಬಸ್ಸು ಸುರಂಗವನ್ನು ಹೊಕ್ಕಿತು. ೨೫೪೭ ಮೀಟರ್ ಉದ್ದದ ಈ ಸುರಂಗದ ಉದ್ದಕ್ಕೂ ವಿದ್ಯುದ್ದೀಪಗಳನ್ನು ಹಾಕಿದ್ದಾರೆ. ಹೋಗುವ ಮತ್ತು ಬರುವ ಮಾರ್ಗಗಳಿಗಾಗಿ ಎರಡು ಸುರಂಗಗಳಿವೆ. ಅದನ್ನು ಹೊಕ್ಕು ಹೊರಬಂದೊಡನೆಯೇ ಕಾಶ್ಮೀರ ಕಣಿವೆ ಆರಂಭವಾಗುತ್ತದೆ. ಎತ್ತ ನೋಡಿದರೂ ಹಸಿರು ಸಸ್ಯರಾಶಿ, ದೂರದಲ್ಲಿ ಕಾಣುವ ಬೆಟ್ಟಗುಡ್ಡಗಳು, ದಾರಿಗುಂಟವೂ ವೇಗವಾಗಿ ಹರಿದು ಬರುತ್ತಿರುವ ಶುಭ್ರ ಧವಳಕಾಂತಿಯ ಜೀಲಮ್ ನದಿಯ ನೀರು – ಇವೆಲ್ಲವನ್ನೂ ನೋಡುತ್ತಿದ್ದಂತೆಯೇ ಕತ್ತಲು ಆವರಿಸಿತು. ನಾವು ಶ್ರೀನಗರಕ್ಕೆ ಬಂದು ಅಲ್ಲಿನ ರಾಮಕೃಷ್ಣ ಆಶ್ರಮವನ್ನು ತಲುಪಿದಾಗ ರಾತ್ರಿ ೧೦ ಗಂಟೆ.

## ಚಂದದ ಚಂದನವಾಡಿಗೆ

ಮರುದಿನ ಮಧ್ಯಾಹ್ನ ಊಟಮಾಡಿ, ಅಮರನಾಥಯಾತ್ರೆಯ ಮೊದಲ ತಂಗುದಾಣ ಪಹಲ್‌ಗಾಂವ್‌ಗೆ ಹೊರಟೆವು. ಮಧ್ಯದಲ್ಲಿ ಬರುವ ಊರು ಅನಂತನಾಗ್. ಅಲ್ಲಿಂದ ನೇರ ದಾರಿ. ಯಾತ್ರಾರ್ಥಿಗಳ ವಾಹನಗಳ ಓಡಾಟ ಜಾಸ್ತಿಯಾಗಿತ್ತು. ದಾರಿಯುದ್ದಕ್ಕೂ **'ಅಮರನಾಥ ಯಾತ್ರಿಗಳಿಗೆ ಸುಸ್ವಾಗತ'** ಎಂಬ ಬ್ಯಾನರ್‌ಗಳು. ಮಾರ್ಗದಲ್ಲಿ ಕಾಶ್ಮೀರದ ಹಳ್ಳಿಗಳನ್ನು ನೋಡುವ ಅವಕಾಶ ಸಿಕ್ಕಿತು. ಅಪೂರ್ವ ಪ್ರಕೃತಿ ಸೌಂದರ್ಯದ ನಡುವೆಯೂ ಫಲವತ್ತಾದ ಭೂಮಿ ಮತ್ತು ಯಥೇಚ್ಛ ನೀರಿನ ಸೌಲಭ್ಯವಿದ್ದರೂ ನಿರಕ್ಷರತೆ ಮತ್ತು ದಾರಿದ್ರ್ಯವೇ ಎಲ್ಲ ಕಡೆ ತಾಂಡವವಾಡುತ್ತಿದ್ದುವು. ದಾರಿಯ ಪಕ್ಕದಲ್ಲಿಯೇ ನದಿಯೊಂದು ವೇಗವಾಗಿ ಜುಳುಜುಳು ಹರಿಯುತ್ತಿತ್ತು. ರಸ್ತೆಯುದ್ದಕ್ಕೂ ಬಿಗಿ ಭದ್ರತೆಯ ಏರ್ಪಾಡು, ಅಲ್ಲಲ್ಲಿ ಕಾಣುವ ಬಂಕರುಗಳು, ರಸ್ತೆಯಲ್ಲಿ ಮಧ್ಯೆಮಧ್ಯೆ ಕಾಣುವ ದೊಡ್ಡ ಬಂದೂಕು ಹೊತ್ತ ಆಯುಧವಾಹನಗಳು. ಇಷ್ಟಾದರೂ ಉತ್ಸಾಹ ಕುಂದದೆ, ಭಕ್ತಿಭರಿತರಾಗಿ 'ಜೈ ಅಮರನಾಥ್, ಜೈ **ಬೋಲೇನಾಥ್**' ಎಂದು ಕೂಗಿಹೇಳುತ್ತಿರುವ ಯಾತ್ರಿಕರು– ಇಷ್ಟೆಲ್ಲ ಕಾಣಬರುತ್ತಿದ್ದುವು. ಪಹಲ್‌ಗಾಂವ್ ಪಟ್ಟಣಕ್ಕೆ ೨ ಕಿ.ಮಿ. ದೂರದಲ್ಲಿಯೇ ಎಲ್ಲ ವಾಹನಗಳನ್ನೂ ನಿಲ್ಲಿಸಿ

ಭದ್ರತಾ ತಪಾಸಣೆ ಮಾಡಲಾಯಿತು. ಯಾತ್ರಿಕರೆಲ್ಲರೂ ತಮ್ಮ ಸಾಮಾನುಗಳನ್ನು ಹೊತ್ತುಕೊಂಡು ಮೆಟಲ್ ಡಿಟೆಕ್ಟರ್ ಅನ್ನು ಹಾದುಹೋಗಬೇಕು. ಅಷ್ಟೇ ಅಲ್ಲ, ಅವರ ವಸ್ತ್ರಗಳನ್ನೂ ಶರೀರವನ್ನೂ ಯಾವುದೇ ತೆರನಾದ ಸ್ಫೋಟಕವಸ್ತು ಅಥವಾ ಆಯುಧಗಳು ಇವೆಯೇ ಎಂದು ತಪಾಸಣೆ ಮಾಡುತ್ತಾರೆ. ಅವನ್ನೆಲ್ಲ ಮುಗಿಸಿಕೊಂಡು ಮತ್ತೆ ಬಸ್ಸನ್ನು ಹತ್ತಿದೆವು. ಪಹಲ್‌ಗಾಂವ್ ತಲುಪಿದಾಗ ಸಂಜೆ ೬ ಗಂಟೆ.

ಪಹಲ್‌ಗಾಂವ್ ಸಮುದ್ರಮಟ್ಟದಿಂದ ೭೨೦೦ ಅಡಿಗಳ ಎತ್ತರವಿರುವ ಒಂದು ವಿಹಾರಸ್ಥಳ, ಮೋಜುದಾಣ. ರಮ್ಯ ಸೌಂದರ್ಯದ ಯಾತ್ರೀಧಾಮ. ಅಮರನಾಥ ಯಾತ್ರಿಗಳಲ್ಲದೆ, ಮಿಕ್ಕ ಕಾಲದಲ್ಲಿ ಇಲ್ಲಿ ಶಾಲಾಕಾಲೇಜುಗಳ ವಿದ್ಯಾರ್ಥಿಗಳು ಮತ್ತಿತರರು ಪಿಕ್‌ನಿಕ್‌ಗಾಗಿ ಬರುತ್ತಲೇ ಇರುತ್ತಾರೆ. ಅಲ್ಲಿ ರಾತ್ರಿ ಕಳೆದೆವು. ಪುರಾಣಕಾಲದ ಕಥೆಯ ಪ್ರಕಾರ ಶಿವನು ಪಾರ್ವತಿಗೆ ಅಮರ ಕಥೆಯನ್ನು ಹೇಳಲು ಹಿಮಾಲಯಕ್ಕೆ ಹೋದನು, ಮಾರ್ಗಮಧ್ಯದ ಅನಂತನಾಗದಲ್ಲಿ ತನ್ನ ಹಾವನ್ನು ಬಿಟ್ಟನು, ಪಹಲ್‌ಗಾಂವ್‌ನಲ್ಲಿ ತನ್ನ ವಾಹನ ನಂದಿಯನ್ನೇ ತ್ಯಜಿಸಿದನು.

ಅಲ್ಲಿಂದ ಚಂದನವಾಡಿ ಎನ್ನುವ ಜಾಗಕ್ಕೆ ೧೬ ಕಿ.ಮಿ. ದೂರ ಜೀಪಿನಲ್ಲಿ ಹೋಗಬೇಕು. ಚಂದನವಾಡಿ ಸಮುದ್ರತಟದಿಂದ ೯೫೦೦ ಅಡಿ ಎತ್ತರವಿದೆ. ಅಮರ ಕಥೆಯನ್ನು ಹೇಳಲು ಹೋಗುತ್ತಿದ್ದ ಶಿವನು ಇಲ್ಲಿ ತನ್ನ ಶಿರದಲ್ಲಿರುವ ಚಂದ್ರನನ್ನು ತ್ಯಜಿಸಿದನು ಎಂದು ಪುರಾಣ ಕಥೆ ಹೇಳುತ್ತದೆ. ಬೆಳಗ್ಗೆ ೬ ಗಂಟೆಯ ಹೊತ್ತಿಗೆ ಅಲ್ಲಿಗೆ ತಲುಪಿ, ಭಕ್ತರು ನಡೆಸುತ್ತಿದ್ದ ಉಚಿತ ಉಪಾಹಾರ ಮಂದಿರಗಳಲ್ಲಿ ಟೀ, ಬಿಸ್ಕತ್ತುಗಳನ್ನು ಸೇವಿಸಿ, ನಡೆಯಲು ಆರಂಭಿಸಿದೆವು. ನಡೆಯುವ ಮಾರ್ಗದುದ್ದಕ್ಕೂ ಹಲವಾರು ಸ್ಥಳಗಳಲ್ಲಿ ಲಂಗರ್ ಎಂದು ಕರೆಯುವ ಉಚಿತ ಭೋಜನ ಮತ್ತು ಉಪಾಹಾರ ಕೇಂದ್ರಗಳಿವೆ. ಪಂಜಾಬ್, ಹರಿಯಾಣ, ದಿಲ್ಲಿ, ಉತ್ತರ ಪ್ರದೇಶ ಮೊದಲಾದ ಕಡೆಗಳಿಂದ ಬಂದ ಭಕ್ತರು ಇದನ್ನು ಅಮರನಾಥನ ಸೇವೆಯೆಂದು ನಡೆಸುತ್ತಾರೆ. ಆದ್ದರಿಂದ ಎಲ್ಲೆಡೆ ಭಗವಂತನ ಪ್ರಸಾದ ಈ ರೂಪದಲ್ಲಿ ಲಭಿಸುತ್ತದೆ.

ಪಿಸ್ಸು ಟಾಪ್

ಚಂದನವಾಡಿಯಲ್ಲಿ ಉಣ್ಣೆ ವಸ್ತ್ರ ಮತ್ತು ರೈನ್ ಕೋಟ್‌ಗಳಿಂದ ಸಜ್ಜಿತರಾಗಿ ನಡೆಯಲು ಆರಂಭಿಸಿದೆವು. ಅರ್ಧಗಂಟೆಯಲ್ಲಿ ಅವೆಲ್ಲವನ್ನೂ ತೆಗೆದಿಡಬೇಕಾಯಿತು. ಕಾರಣ ಬಿಸಿಲಿನ ಝಳ ಮತ್ತು ಕಿತ್ತು ಬರುತ್ತಿದ್ದ ಬೆವರು. ಈಗ ನಾವು ಇಡೀ ಯಾತ್ರೆಯ ಮಾರ್ಗದಲ್ಲಿ ಅತ್ಯಂತ ಕಡಿದಾದ ಮತ್ತು ಕಷ್ಟಕರವಾದ ಮಾರ್ಗವನ್ನು ಕ್ರಮಿಸುತ್ತಿದ್ದೇವೆ. ಎಂತಹ ಸುದೃಢ ಕಾಯದ ಯುವಕನೂ ಇಲ್ಲಿ ಮೇಲುಸಿರುಬಿಡುತ್ತ ಹತ್ತುತ್ತಾನೆ. ಸುಮಾರು ೮೦ ಡಿಗ್ರಿ ನೇರ ಎತ್ತರವನ್ನು ಸರ್ಪದಂತೆ ಸುತ್ತಿಸುತ್ತಿ ಹೋಗುತ್ತಿರುವ ದಾರಿಯಲ್ಲಿ ಕ್ರಮಿಸಬೇಕಾಗುತ್ತದೆ. ದಾರಿಯೋ ಕೆಸರುಕಲ್ಲುಮಯ. ಸಾಲದ್ದಕ್ಕೆ ಮೇಲೆ ಹೋಗುತ್ತಿರುವ ಮತ್ತು ಕೆಳಗೆ ಬರುತ್ತಿರುವ ಕುದುರೆಗಳ ಗುಂಪುಗಳು. ಅಲ್ಪಸ್ವಲ್ಪ ಜಾರಿದೆವೆಂದರೇ ನೇರ ಶಿವನ ಪಾದ. ತಲೆಸುತ್ತಿ ಬರುವುದು, ವಿಪರೀತ ದಾಹವಾಗಿ ಬಾಯಿ ಒಣಗುವುದು. ಆದರೂ ಕಣ್ಣನ್ನು ಅತ್ತಿತ್ತ ಹಾಯಿಸಿದರೆ, ಮುಗಿಲೆತ್ತರದ ಪರ್ವತ ಶಿಖರಗಳು ಮತ್ತು ಅವುಗಳಿಂದ ಹಲವಾರು ಕಡೆ ಕೆಳಗೆ ಧುಮುಕುತ್ತಿರುವ ಶುಭ್ರಶ್ವೇತವರ್ಣದ ಜಲಧಾರೆ ಆಯಾಸವನ್ನು ಸ್ವಲ್ಪವಾದರೂ ಮರೆಯಿಸುತ್ತವೆ. ಒಂದೊಂದು ಹೆಜ್ಜೆಯನ್ನು ಕಷ್ಟಪಟ್ಟು, ಹಾಕುತ್ತ, ಎರಡು ಮೂರು ಗಂಟೆ ನಡೆದರೆ ಒಂದು ಎತ್ತರದ ಸ್ಥಳವನ್ನು ತಲುಪುತ್ತೇವೆ. ಇದನ್ನು ಪಿಸ್ಸು ಟಾಪ್ ಎಂದು ಕರೆಯುತ್ತಾರೆ. ಇಲ್ಲಿನ ಐತಿಹ್ಯ ಸ್ವಾರಸ್ಯವಾಗಿದೆ. ಸದಾಶಿವನ ದರ್ಶನಕ್ಕಾಗಿ ದೇವತೆಗಳು, ದಾನವರು ಒಟ್ಟಿಗೆ ಹೋಗುತ್ತಿದ್ದರಂತೆ. ಮೊದಲು ತಾವು ದರ್ಶನ ಪಡೆಯಬೇಕೆಂಬ ಲಾಲಸೆಯಿಂದ ರಾಕ್ಷಸರು ದೇವತೆಗಳನ್ನು ಹಿಂದೆ ಹಾಕಿ ಮುಂದೆ ಧಾವಿಸಿದರು. ಇಬ್ಬರ ಮಧ್ಯೆ ಹಣಾಹಣಿ ಆರಂಭವಾಯಿತು. ಪರಮೇಶ್ವರನನ್ನು ಪ್ರಾರ್ಥಿಸಿದ ದೇವತೆಗಳು ವಿಜಯಿಗಳಾದರು. ರಾಕ್ಷಸರನ್ನು ಹೊಡೆದು ಕೊಂದು ಪುಡಿಪುಡಿ ಮಾಡಿಬಿಟ್ಟರು. ಆ ಪುಡಿಯ ರಾಶಿಯೋ ಪರ್ವತಾಕಾರದಷ್ಟು ಎತ್ತರವಾಗಿ ನಿಂತಿತು. ಈ ಪರ್ವತಶೃಂಗವನ್ನೇ ಪಿಸ್ಸು ಟಾಪ್ ಎನ್ನುತ್ತಾರೆ.

ಶೇಷನಾಗ್

ಇಲ್ಲಿಂದ ಯಾತ್ರಿಗಳು ಸ್ವಲ್ಪ ನಿರಾಳವಾಗಿ ಸಾಗಬಹುದು. ಕಿರಿದಾದ ಮಾರ್ಗವು ಆಕಾಶ ಮುಟ್ಟುವ ಕಡಿದಾದ ಶಿಖರ ಮತ್ತು ಪಾತಾಳ ತಲುಪುವ ಕಣಿವೆಯ ನಡುವೆ ಅಂಕುಡೊಂಕಾಗಿ ಸಾಗುತ್ತದೆ. ನಾವೀಗ ನೀಲಿ ಬಣ್ಣದ ನೀರಿನ ನದಿಯ ದಡದಲ್ಲಿ ನಡೆದುಹೋಗುತ್ತಿದ್ದೇವೆ. ವೇಗವಾಗಿ ಹರಿದು ಬರುತ್ತಿರುವ ಅದರ ರಭಸ ಮತ್ತು ಅಲೆಗಳ ಮೊರೆತ ಬಹು ದೂರ ಎತ್ತರದಲ್ಲಿ ಸಾಗುತ್ತಿರುವ ನಮಗೆ ಕೇಳಿಸುತ್ತಿದೆ. ಅದೋ ನೋಡಿ, ಈ ನದಿ ಸರೋವರವೊಂದರಿಂದ ಆರಂಭವಾಗುತ್ತಿದೆ. ಸರೋವರದ ನೀರು ಬಹಳ ವೇಗವಾಗಿ ಭೋರ್ಗರೆಯುತ್ತ ಧುಮುಕಿ, ನದಿಯಾಗಿ ಹರಿಯುತ್ತದೆ. ಆ ನೀರಿನ ಕಣಗಳು ಆಳೆತ್ತರ ಎದ್ದು, ಮಂಜಿನಂತೆ ಕವಿದಿವೆ. ನಮ್ಮ ದಾರಿ ಈಗ ಆ ಸರೋವರದ ದಂಡೆಯ ಮೇಲೆ ಅಂಕುಡೊಂಕಾಗಿ ಸಾಗುತ್ತಿದೆ. ಶುಭ್ರ ನೀಲವರ್ಣದ ಜಲರಾಶಿಯ ಸುತ್ತಲೂ ಆಕಾಶಕ್ಕೆ ಕೈಮಾಡಿರುವ ಶಿಖರಗಳಿವೆ, ಅವುಗಳ ವಿವಿಧ ಜೋಡಣೆಗಳು ಕಣ್ಣಿಗೆ ಆಹ್ಲಾದ ಉಂಟುಮಾಡುತ್ತಿವೆ. ಮಹಾತ್ಮರ ಮನಸ್ಸು ಈ ಬಗೆಯ ಸರೋವರದ ನಿಶ್ಚಲ ನೀರಿನಂತೆ ಯಾವ ಪ್ರಕ್ಷುಬ್ಧತೆಯೂ ಇಲ್ಲದೆ ಇರುತ್ತದೆ ಎಂದು ಕವಿಗಳು ಹೇಳುತ್ತಾರೆ. ಅಂತಹ ಶಾಂತ ಮನಸ್ಸಿನ ಮಹನೀಯರೇ ಈ ಸರೋವರದ ಶೋಭೆಯನ್ನು ಕಂಡು ಅನುಭವಿಸಿ ಹೇಳಬಲ್ಲರು ಎಂದು ಕಾಣುತ್ತದೆ. ಅಷ್ಟು ಪ್ರಶಾಂತ

ಗಂಭೀರ ಪರಿಸರ ಅಲ್ಲಿ ಒಡಮೂಡಿದೆ. ಇದೇ ***ಶೇಷನಾಗ ಸರೋವರ*** ಈ ಜಾಗ ಸಮುದ್ರತಟದಿಂದ ೧೨,೦೦೦ ಅಡಿಗಳಷ್ಟು ಎತ್ತರದಲ್ಲಿದೆ. ಇದರಾಚೆಗೆ ಮೇಲೆದ್ದುಕೊಂಡಿರುವ ಮುಖ್ಯವಾದ ಮೂರು ಪರ್ವತಶಿಖರಗಳಿಗೆ ಬ್ರಹ್ಮ, ವಿಷ್ಣು ಮಹೇಶ್ವರರ ಹೆಸರು ನೀಡಿದ್ದಾರೆ. (*ಮುಖಪುಟ ನೋಡಿ*)

ಪುರಾಣಕಥೆಯ ಪ್ರಕಾರ ಪಾರ್ವತಿಗೆ ಅಮರಕಥೆಯನ್ನು ಹೇಳಲು ಹೋಗುತ್ತಿದ್ದ ಭಗವಾನ್ ಶಂಕರನು, ಅಲ್ಲಿ ಸರ್ಪರಾಜ ಶೇಷನನ್ನು ಕಾವಲಾಗಿ ನಿಲ್ಲಿಸಿದನು. ಇದಕ್ಕಿಂತಲೂ ಮುಂದೆ ಯಾರೂ ಹೋಗುವುದನ್ನು ನಿಷೇಧಿಸಿದನು. ಆ ಶೇಷ ಇನ್ನೂ ಸರೋವರದಲ್ಲಿ ನೆಲಸಿದ್ದಾನೆ ಎಂದು ಪ್ರತೀತಿ ಇದೆ. ನಾವು ಆಯಾಸದಿಂದ ಬಳಲಿ ಹಸಿವಿನಿಂದ ಕಂಗೆಟ್ಟಿದ್ದೆವು. ಆದರೂ ಆ ಕಷ್ಟವನ್ನೆಲ್ಲ ಸ್ವಲ್ಪಕಾಲ ಮರೆತು ಈ ರಮ್ಯವಾದ ದೃಶ್ಯವನ್ನು ನೋಡುತ್ತ ಹೋಗುತ್ತಿದ್ದಂತೆ, ಧ್ವನಿವರ್ಧಕಗಳಿಂದ ಭಜನೆಗಳ ಸದ್ದು ಕೇಳಿಬಂದಿತು. ಅನತಿ ದೂರದಲ್ಲಿಯೇ ಟೆಂಟ್‌ಗಳು ಕಾಣಿಸಿದವು. ದಾರಿಯಲ್ಲೇ ಇದ್ದ ಲಂಗರ್‌ನಿಂದ ಅಲ್ಲಿನ ಸ್ವಯಂಸೇವಕರು, ನಮ್ಮನ್ನು ಬಂದು ಊಟಮಾಡಿ ವಿಶ್ರಮಿಸಿಕೊಳ್ಳುವಂತೆ ವಿನಂತಿಸಿಕೊಂಡರು. ನೋವು ತುಂಬಿದ ಕಾಲುಗಳು ಲಂಗರ್‌ನತ್ತ ಸಹಜವಾಗಿಯೇ ತಿರುಗಿದವು. ಶುಚಿಯಾದ ರುಚಿಯಾದ ಭೋಜನ ಹೊಟ್ಟೆಯನ್ನಷ್ಟೆ ಅಲ್ಲ, ಮನವನ್ನೂ ತಂಪುಮಾಡಿತು. ಶಾಂತಗೊಂಡ ಮನ, ಸಹಜವಾಗಿಯೇ ಈ ಅಪೂರ್ವಪ್ರಕೃತಿಯ ಕರ್ತಾರನಾದ ಭಗವಾನ್ ಶಿವನನ್ನು ನೆನೆಸಿತು. ಅಲ್ಲಿಂದ ಇನ್ನೂ ಸ್ವಲ್ಪ ಮುಂದೆ ಹೋಗಿ, ಹಾಕಿದ್ದ ನೂರಾರು ಟೆಂಟ್‌ಗಳಲ್ಲಿ ಒಂದರಲ್ಲಿ ಹೊಕ್ಕು ಕಾಲು ಚಾಚಿ ವಿಶ್ರಮಿಸಿದೆವು. ಸೋತ ಕಣ್ಣುಗಳು ಮುಚ್ಚಿಕೊಂಡರೂ, ಆ ಎತ್ತರದ ಪ್ರದೇಶದಲ್ಲಿ ಆಮ್ಲಜನಕದ ಅಭಾವದ ಕಾರಣದಿಂದ, ತಲೆಶೂಲೆ ಮತ್ತು ನಿದ್ರಾಹೀನತೆ. ಒಂದು ಬಗೆಯ ಮಂಪರಿನ ಸ್ಥಿತಿಯಲ್ಲಿದ್ದ ನಾವು ಹಾಸಿಗೆಯ ಮೇಲೆ ಹಾಗೆಯೇ ಮುದುಡಿಕೊಂಡೆವು.

*ಮಹಾಗುಣ ಟಾಪ್*

ಬೆಳಗ್ಗೆ ಐದು ಗಂಟೆಗೆ ಎದ್ದು ಲಂಗರ್‌ನಲ್ಲಿ ಟೀ ಕುಡಿದು ಹೊರಟುಬಿಟ್ಟೆವು. ಇಂದು ಯಾತ್ರೆಯ ಎರಡನೆಯ ದಿನ. ಇವತ್ತು ನಾವು ಯಾತ್ರೆಯ ಮಾರ್ಗದಲ್ಲಿಯೇ ಅತಿ ಎತ್ತರದ ಪ್ರದೇಶವನ್ನು ಹತ್ತಬೇಕು. ಶಿವನನ್ನು ಸ್ಮರಿಸುತ್ತ ಹೊರಟೆವು. ನಾವೀಗ ಹೋಗುತ್ತಿರುವ ಪರ್ವತಶಿಖರದ ಹೆಸರು ಮಹಾಗುಣ ಎಂದು. ಮೊದಲಿನಂತೆಯೇ ಮುಂದೆಮುಂದೆ ಹೋಗುತ್ತಿದ್ದಂತೆಯೇ ಪರ್ವತಶಿಖರಗಳು ಶಿಸ್ತಿನ ಸೈನಿಕರಂತೆ ಅಕ್ಕಪಕ್ಕದಲ್ಲಿ ಎದ್ದುಕೊಂಡಿರುವುದು ಕಾಣುತ್ತದೆ. ಯಾತ್ರಿಗಳಲ್ಲಿ ಯುವಕರು ಮತ್ತು ಮಧ್ಯವಯಸ್ಸಿನವರೇ ಅಧಿಕವಾದರೂ ವೃದ್ಧರೂ ಕಮ್ಮಿಯೇನಲ್ಲ. ಆ ದುರ್ಗಮ ದಾರಿಯಲ್ಲಿ ಅವರಿಗೆ ಒಂದೊಂದು ಹೆಜ್ಜೆಯೂ ಯಾತನೆಯಾಗಬಲ್ಲದು. ಅವರ ಭಕ್ತಿ, ಶ್ರದ್ಧೆ, ಧೈರ್ಯ ಮತ್ತು ದೃಢತೆಗಳು ಮಾತ್ರವೇ ಅವರನ್ನು ಮುಂದೆ ಮುಂದೆ ಸಾಗಲು ಪ್ರೇರೇಪಿಸುತ್ತವೆ. ಅವರೆಲ್ಲರೂ ಅಮರನಾಥನ ದರ್ಶನ ಮಾಡಬೇಕೆಂಬ ಮನದಾಳದ ಬಯಕೆಯೊಂದರಿಂದಲೇ ಉತ್ತೇಜಿತರಾಗಿ ಹುರುಪು ಉತ್ಸಾಹಗಳಿಂದ ಮುನ್ನಡೆಯುತ್ತಿರುತ್ತಾರೆ. ಮಹಾಗುಣ ಪರ್ವತದ ದಾರಿ ಅಷ್ಟು ಕಡಿದಾಗಿಲ್ಲ. ಆದರೂ ಆ ಇಡೀ ಪರ್ವತಶ್ರೇಣಿ ಅದ್ಭುತರಮಣೀಯ ದೃಶ್ಯವನ್ನು ಹೊಂದಿದೆ. ಇದರ ಶಿಖರ ಸಮುದ್ರತಟದಿಂದ ೧೪,೫೦೦ ಅಡಿ ಎತ್ತರವಿದೆ. ಅದನ್ನು ತಲುಪಿದೆವು. ಇದು ಅಮರನಾಥ ಯಾತ್ರೆಯ ಮಾರ್ಗದಲ್ಲಿಯೇ ಅತ್ಯಂತ ಎತ್ತರದ ಪ್ರದೇಶ. ಇಲ್ಲಿ ಆಮ್ಲಜನಕದ ವಿರಳತೆ ಅನುಭವಕ್ಕೆ ಬರುತ್ತದೆ. ಆದ್ದರಿಂದಲೇ ಯಾತ್ರಿಗಳು ಇಲ್ಲಿ ಜಾಸ್ತಿ ಸಮಯ ಕಳೆಯದೆ ಮುಂದೆ ಸಾಗಿಬಿಡುವರು.

*ಪಂಚತರಣಿ*

ಮಹಾಗುಣ ಪರ್ವತಶಿಖರದಿಂದ ನಾವೀಗ ***ಪಂಚತರಣಿ*** ಎಂಬ ಜಾಗಕ್ಕೆ ಹೋಗುತ್ತಿದ್ದೇವೆ. ಯಾತ್ರೆಯ ಮಾರ್ಗದಲ್ಲಿಯೇ ಅನಾಯಾಸವಾಗಿ ಸಾಗಬಹುದಾದ ಮಾರ್ಗ ಇದು. ಇಳಿಜಾರಿನಲ್ಲಿ ಇಳಿದರೆ ಸಮತಟ್ಟಾದ ವಿಶಾಲವಾದ ಮಾರ್ಗ ಎದುರಾಗುತ್ತದೆ. ಬಹುದೂರ ನಡೆದನಂತರ ಒಂದು ಕಡೆ ಕಡಿದಾದ ಕಲ್ಲುಬೆಟ್ಟ ಕಾಣಸಿಗುತ್ತದೆ. ಅದರ ಮೇಲೆ ಒಂದು ಸೈನಿಕ ಠಾಣೆ ಇದೆ. ತದನಂತರ ಒಂದು ದೊಡ್ಡ ಬಯಲು ಪ್ರದೇಶ. ಅದರ ಮೇಲೆ ಹಸಿರು ಹಾಸಿನ ಹುಲ್ಲುಗಾವಲು. ಬಲದಲ್ಲಿ ಎರಡು ಮೂರು ಪರ್ವತಶಿಖರಗಳು ಪರಸ್ಪರ ಜೋಡಿಸಿಕೊಂಡಿವೆ. ಅವುಗಳ ಹಲವುಭಾಗ ಹಿಮಾವೃತ. ಹಿಮಾವೃತವಾಗದ ಕಡೆ ಬಣ್ಣಬಣ್ಣದ ಬೃಹದಾಕಾರದ ಕಲ್ಲಿನ ಚಿತ್ರವಿಚಿತ್ರ ಸೋಪಾನಗಳ ರೂಪಗಳು. ಅದರ ಹಿಂದೆ ನೀಲಿ ಶುಭ್ರ ಆಗಸ. ಬಯಲಲ್ಲಿ ನದಿಯೊಂದು ಹಲವು ಭಾಗಗಳಾಗಿ



*ಪಂಚತರಣಿಯಲ್ಲಿ ಟೆಂಟ್‌ಗಳು*

ಹರಿದು ಹೋಗುತ್ತಿದೆ. ಈ ಬಟ್ಟಬಯಲನ್ನು ದಾಟಿ, ಪರ್ವತ ಭಾಗವೊಂದನ್ನು ಹತ್ತಿ ಮುನ್ನಡೆಯುವ ಹೊತ್ತಿಗೆ ಮಟಮಟ ಬಿಸಿಲು. ದೂರದಲ್ಲಿ ನೂರಾರು ಟೆಂಟ್‌ಗಳಿರುವ ಪ್ರದೇಶವನ್ನು ಕಾಣುತ್ತೇವೆ. ಇದೇ ಪಂಚತರಣಿ. ಪಂಚತರಣಿಯಲ್ಲಿ ಟೆಂಟ್ ಒಂದರಲ್ಲಿ ನಮ್ಮ ಸಾಮಾನುಗಳನ್ನು ಇಟ್ಟು, ಮಾಡಿದ ಮೊದಲ ಕೆಲಸ, ಆ ಬಿಸಿಲಿನ ಝಳವನ್ನು ಇಂಗಿಸಿಕೊಳ್ಳಲು ನದಿಗೆ ಹೋಗಿ ಸ್ನಾನಮಾಡಿದ್ದು. ಮೇಲೆ ಕಾದ ಸೂರ್ಯನಾದರೆ, ನದಿಯ ನೀರು ಮಂಜುಗಡ್ಡೆಯಷ್ಟು ಕೊರೆಯುತ್ತಿತ್ತು. ಬಳಲಿದ್ದ ನಾವು ಸ್ನಾನದಿಂದ ಮೈಮನಗಳನ್ನು ಆಹ್ಲಾದ ಮಾಡಿಕೊಂಡೆವು. ಇಲ್ಲೊಂದು ಸೈನಿಕ ಠಾಣೆ, ಹೆಲಿಪ್ಯಾಡ್ ಇವೆ. ಹೆಲಿಕ್ಯಾಪ್ಟರ್‌ಗಳು ಬಂದು ಹೋಗಿ ಮಾಡುತ್ತಿರುತ್ತವೆ. ಬಯಲು ಪ್ರದೇಶ. ಇಲ್ಲಿಂದ ನಮ್ಮ ಗಮ್ಯಸ್ಥಳ ಅಮರನಾಥನ ಪವಿತ್ರಗುಹೆಗೆ ಕೇವಲ ಆರು ಕಿ.ಮಿ. ಪುರಾಣಕಥೆಯ ಪ್ರಕಾರ ಪಾರ್ವತಿಗೆ ಅಮರ ಕಥೆಯನ್ನು ಹೇಳಲು ಹೋಗುತ್ತಿದ್ದ ಭಗವಾನ್ ಶಂಕರನು ಇಲ್ಲಿ ಶಿವಪಂಚತತ್ತ್ವಗಳನ್ನು ತ್ಯಜಿಸಿ, ನಟರಾಜನ ರೂಪವನ್ನು ಧರಿಸಿ ನರ್ತಿಸಿದನು. ಆಗ ಕಟ್ಟಿದ್ದ ಜಡೆ ಬಿಚ್ಚಿತು. ಜಟೆಯಲ್ಲಿ ಬಂಧಿತಳಾಗಿದ್ದ ಗಂಗೆ ಐದು ದಿಕ್ಕುಗಳಲ್ಲಿ ಜಟೆಯ ಸಂದುಗಳಿಂದ ಹರಿದು ಬಂದಳು. ಇದರಿಂದಲೇ ಈ ಕ್ಷೇತ್ರ ಪಂಚತರಣಿ ಎಂದು ಹೆಸರು ಪಡೆಯಿತು.

## ಅಮರಗಂಗೆಯ ತಟದಲ್ಲಿ

ಇಲ್ಲಿ ರಾತ್ರಿ ಕಳೆದು ಬೆಳಗ್ಗೆ ಸುಮಾರು ೭.೩೦ರ ಹೊತ್ತಿಗೆ ಎಲ್ಲರೂ ಗುಹೆಯತ್ತ ಹೊರಟೆವು. ಆ ನಿರ್ಜನ ಮಾರ್ಗ ಜನರಿಂದ ಕುದುರೆಗಳಿಂದ ತುಂಬಿಹೋಯಿತು. ನಡೆದು ಹೋಗುವವರು ಕಡಿದಾದ ಮಾರ್ಗದಲ್ಲಿ ಒಬ್ಬರ ಹಿಂದೆ ಒಬ್ಬರು ಸಾಲಾಗಿ ಬೆಟ್ಟದ ಕಡೆ ಚಲಿಸುತ್ತಿದ್ದರೆ, ಪ್ರಪಾತದ ಕಡೆ. ನೂರಾರು ಕುದುರೆಗಳು ಒಂದರ ಹಿಂದೆ ಇನ್ನೊಂದು ಸವಾರರನ್ನು ಹೊತ್ತು ಹೋಗುತ್ತಿದ್ದವು. ಪಟ್ಟಣದ ಮಾರುಕಟ್ಟೆಯಲ್ಲಿರುವಷ್ಟು ಜನಸಾಂದ್ರತೆ, ಗಲಾಟೆ. ಇದು ಕೆಲದೂರ ಮಾತ್ರ. ನಂತರ ಮಾರ್ಗ ಮೊದಲಿನಂತೆ ಸರಾಗವಾಯಿತು. ಇಕ್ಕಟ್ಟಿನ ಜಾಗದಲ್ಲಿ, ಪರ್ವತಪ್ರಪಾತಗಳ ಮಧ್ಯೆ ಒಬ್ಬರ ಹಿಂದೆ ಒಬ್ಬರು ಸಾಗುತ್ತಿದ್ದೆವು. ಸುಮಾರು ಒಂದೂವರೆ ಗಂಟೆಯ ನಂತರ, ಬೆಟ್ಟದ ದಾರಿ ಮುಗಿಯಿತು. ಮಂಜಿನ ಗ್ಲೇಸಿಯರ್ ಮೇಲೆ ಈಗ ನಡೆದುಹೋಗಬೇಕು. ಆ ಹಿಮಪ್ರಪಾತದಲ್ಲಿ ಜನಗಳು ನಡೆದೂ ನಡೆದೂ ದಾರಿ ಏರ್ಪಟ್ಟಿದೆ. ಅದರಲ್ಲಿ ನಿಧಾನವಾಗಿ ಜಾಗರೂಕತೆಯಿಂದ ಸಾಗಿದೆವು.

ಮುಂದೆ ಬರುವುದು ಎರಡು ಗುಡ್ಡಗಳ ನಡುವಿನ ಒಂದು ಕಣಿವೆ. ಅದರಲ್ಲಿ ಒಂದು ನದಿ ಹರಿಯುತ್ತಿದೆ. ಇದೇ ಅಮರಗಂಗಾ. ಇಲ್ಲಿ ಅಂಗಡಿಮುಂಗಟ್ಟುಗಳು ಬೇಕಾದಷ್ಟಿವೆ. ಕುದುರೆಗಳ ಮೇಲೆ ಹತ್ತಿಬಂದ ಯಾತ್ರಿಕರು ಇಲ್ಲಿ ಇಳಿದುಕೊಳ್ಳಬೇಕು. ಆ ಜಾಗವನ್ನು ತಲುಪಿದಾಗ ಆಗಲೇ ಬಿಸಿಲು ಏರುತ್ತಿತ್ತು. ಜನಜಂಗುಳಿ, ಕೂಗಾಟ. ಇದರ ಮಧ್ಯೆ ನದಿಯ ಹತ್ತಿರ ಸ್ನಾನ ಮಾಡುತ್ತಿರುವವರ ಗುಂಪು. ನಾವೂ ಸ್ನಾನ ಮಾಡಿದೆವು. ಹಿಮದ ನೀರು ಮೈಯನ್ನು ಸೋಂಕಿದೊಡನೆಯೇ ನಡುಕ ಹುಟ್ಟಿತು. ಬೇಗ ಹೋಗಿ ಒರೆಸಿಕೊಂಡು, ಬಟ್ಟೆಹಾಕಿಕೊಳ್ಳುವವರೆಗೆ ವಿಪರೀತ ನಡುಕ. ಅಲ್ಲಿಂದ ಅಮರನಾಥ ಪವಿತ್ರ ಗುಹೆಗೆ ಕೇವಲ ಒಂದು ಕಿ.ಮಿ. ಮಂಜಿನ ದಾರಿ. ಆ ದಾರಿಯಲ್ಲಿ ನಡೆದು ಆಚೆಯ ಕಡೆ ಬಂದೆವು. ಅದೇ ಪವಿತ್ರಗುಹೆಯಿರುವ ಗುಡ್ಡದ ಬುಡ. ಅಲ್ಲಿ ತಲುಪಿದಾಗ ಬೆಳಗಿನ ೧೧ ಗಂಟೆ.

## ಅಮರನಾಥನ ಸಾನ್ನಿಧ್ಯದಲ್ಲಿ

ಟೆಂಟ್‌ನಲ್ಲಿ ಸ್ವಲ್ಪಹೊತ್ತು ವಿಶ್ರಮಿಸಿಕೊಂಡು ಅಮರನಾಥನ ದರ್ಶನಕ್ಕೆ ಹೊರಟೆವು. ಇಷ್ಟುದೂರ ತಾಪತ್ರಯ ಪಟ್ಟು ಬಂದಿದ್ದ ನಮಗೆ ಇಲ್ಲಿಯೂ ಆ ಭಗವಾನ್ ಶಿವ ಸರಾಗವಾಗಿ ಹೋಗಲು ಬಿಡುವುದಿಲ್ಲ. ಪವಿತ್ರಗುಹೆಯನ್ನು ತಲುಪಲು ಹಿಮದ ಸಣ್ಣ ಗುಡ್ಡವನ್ನು ಏರಬೇಕು. ಅಭ್ಯಾಸವಿಲ್ಲದ ಬಹಳಷ್ಟು ಜನ ಜಾರುವ ಸಂಭವ ಜಾಸ್ತಿ. ಒಂದೊಂದು ಹೆಜ್ಜೆಯನ್ನು ತೂಗಿತೂಗಿ ಹಾಕಬೇಕು. ಹೀಗೆ ಸ್ವಲ್ಪ ದೂರ ಆ ಹಿಮದ ಗುಡ್ಡವನ್ನು ಏರಿದರೆ, ಸಿಮೆಂಟ್ ಮೆಟ್ಟಲುಗಳು, ಕಟಕಟೆ ಆರಂಭವಾಗುತ್ತವೆ. ಅಲ್ಲಿ ಸಾಲಾಗಿ ನಿಂತು, ನಮ್ಮ ಸರದಿಗಾಗಿ ಕಾಯಬೇಕು. ಭಕ್ತಿಭಾವದಿಂದ ಉದ್ವಿಗ್ನರಾಗುವ ಭಕ್ತರು ಜೈ ಭೋಲೇನಾಥ್, ಹರ ಹರ ಮಹಾದೇವ್, ಜೈ ಭೋಲೇ ಭಂಭಂ ಭೋಲೇ ಎಂದು ಜೈಕಾರ ಮಾಡುತ್ತಿರುತ್ತಾರೆ. ಪರಿಸರ ಒಂದು ಅನಿರ್ವಚನೀಯ ಆಧ್ಯಾತ್ಮಿಕ ವಾತಾವರಣದಿಂದ ತುಂಬಿಕೊಂಡಿರುತ್ತದೆ.

ನಾಗರಿಕತೆಗೆ ಅತ್ಯಂತ ದೂರದಲ್ಲಿನ ದುರ್ಗಮ ಪ್ರದೇಶದಲ್ಲಿರುವ ಈ ಗುಹೆಯನ್ನು ಯಾರು ಮೊದಲು ಕಂಡು ಹಿಡಿದರು ಎನ್ನುವುದಕ್ಕೆ ಸ್ಥಳೀಯ ಐತಿಹ್ಯ ಹೀಗಿದೆ. ಬೂಟಾ ಮಲ್ಲಿಕ್ ಎನ್ನುವ ಒಬ್ಬ ಮುಸಲ್ಮಾನನಿದ್ದನು. ಕುರಿ ಮೇಯಿಸುವುದೇ ಅವನ ಉದ್ಯೋಗ. ಅವನು ಬಹಳ ದಯಾಳು, ಒಳ್ಳೆಯ ಮನುಷ್ಯ. ಒಮ್ಮೆ ಅವನು ಕುರಿಗಳನ್ನು ಕಾಯುತ್ತ ಬಹುದೂರ ಹೋಗಿಬಿಟ್ಟನು. ಅಲ್ಲೊಂದು ಕಡೆ ಒಬ್ಬ ಸಾಧುವಿನ ದರ್ಶನಭಾಗ್ಯ ಅವನಿಗೆ ಸಿಕ್ಕಿತು. ಆ ಸಾಧುವು ಚಳಿ ಕಾಯಿಸಿಕೊಳ್ಳಲು ಕಾಶ್ಮೀರಿಗಳು ಉಪಯೋಗಿಸುವ ಕಾಂಗ್ರಿ ಎಂಬ ಸಣ್ಣ ಮಡಕೆಯನ್ನು ಅವನಿಗೆ ಕೊಟ್ಟನು. ಅದರೊಳಗೆ ಇದ್ದಿಲು ಇರುತ್ತದೆ. ಇದ್ದಿಲನ್ನು ಕಾಯಿಸಿ, ಕೈಯನ್ನು ಅದರ ಮೇಲೆ ಆಡಿಸುತ್ತ ಚಳಿ ಕಾಯಿಸಿಕೊಳ್ಳುವರು. ಸಾಧುವಿನ ಕೊಡುಗೆಯನ್ನು ಪಡೆದುಕೊಂಡು ಬೂಟಾ ಮಲ್ಲಿಕ್ ಮನೆಗೆ ಬಂದು ನೋಡುತ್ತಾನೆ, ಕಾಂಗ್ರಿಯ ಒಳಗಿರುವ ಇದ್ದಿಲು ಚಿನ್ನವಾಗಿ ಬಿಟ್ಟಿದೆ. ಒಡನೆ ಆ ಸಾಧುವನ್ನು



ಅಮರನಾಥ ಗುಹೆಯ ದೃಶ್ಯ

ಹುಡುಕಿಕೊಂಡು, ಮತ್ತೆ ಅಲ್ಲಿಗೆ ಬರುತ್ತಾನೆ. ಆದರೆ ಆ ಜಾಗದಲ್ಲಿ ಸಾಧು ಇರುವುದಿಲ್ಲ, ಒಂದು ದೊಡ್ಡ ಗುಹೆ ಕಾಣಿಸಿಕೊಂಡಿತು.

ನಾವು ಈಗ ಪವಿತ್ರ ಗುಹೆಯ ಬಾಗಿಲಿನಲ್ಲಿ ನಿಂತಿದ್ದೇವೆ. ಅಮರನಾಥನ ಪವಿತ್ರ ಗುಹೆ ಸಮುದ್ರತಲದಿಂದ ೧೨,೭೩೦ ಅಡಿ ಎತ್ತರವಿದೆ. ಇದರ ಉದ್ದ ೬೦ ಅಡಿ, ಅಗಲ ೨೫ ರಿಂದ ೩೦ ಅಡಿ ಮತ್ತು ಎತ್ತರ ೧೫ ಅಡಿ. ಮೇಲಿನಿಂದ ಮಂಜು ಕರಗಿದ ನೀರಿನ ಹನಿಗಳು ಬೀಳುತ್ತಲೇ ಇರುತ್ತವೆ. ಹಾಗೂ ಇಲ್ಲಿನ ವೈಚಿತ್ರ್ಯವೆಂದರೆ, ಅಕ್ಕಪಕ್ಕ ಎಲ್ಲಿಯೂ ಕಾಣಸಿಗದ ಪಾರಿವಾಳಗಳ ಹಿಂಡು, ಗುಹೆಯ ಗೋಡೆಯಲ್ಲಿನ ಗೂಡುಗಳಲ್ಲಿ ಮನೆಮಾಡಿಕೊಂಡಿವೆ. ಬೂದು ಬಣ್ಣದವುಗಳ ಜೊತೆಗೆ, ಕೆಲವು ಬಿಳಿಯ ಬಣ್ಣದ ಪಾರಿವಾಳಗಳೂ ಇವೆ. ಅವುಗಳ ದರ್ಶನ ಬಹಳ ಪುಣ್ಯಕರವೆಂದು ಭಕ್ತರು ಭಾವಿಸುತ್ತಾರೆ. ಈ ಗುಹೆ ಮಾನವನಿರ್ಮಿತವಲ್ಲ, ಪ್ರಕೃತಿಸಹಜವಾಗಿ ರೂಪಗೊಂಡದ್ದು. ಭಗವಾನ್ ಶಂಕರನು ಪಾರ್ವತಿಗೆ ಅಮರ ಕಥೆಯನ್ನು ಇಲ್ಲಿಯೇ ಹೇಳಿದನು ಎನ್ನುತ್ತದೆ ಪುರಾಣಕಥೆ.

## ಪೌರಾಣಿಕ ಹಿನ್ನೆಲೆ

ಅನೇಕ ಯುಗಗಳ ಹಿಂದೆ ಪಾರ್ವತಿಯ ಮನಸ್ಸಿನಲ್ಲಿ ಒಂದು ಶಂಕೆಯು ಉತ್ಪನ್ನವಾಗಿತ್ತು. ಶಂಕರನು ರುಂಡಮಾಲೆಯನ್ನು ಧರಿಸಿದ್ದು ಯಾವಾಗ ಎಲ್ಲಿ ಎಂದು. "ಪಾರ್ವತೀ, ನಿನ್ನ ಜನ್ಮ ಯಾವಾಗ ಉಂಟಾಯಿತೋ ಆಗಿನಿಂದ ನಾನು ರುಂಡಮಾಲೆಯನ್ನು ಧರಿಸಲು ಆರಂಭಿಸಿದೆ" ಎನ್ನುತ್ತಾನೆ ಭಗವಾನ್ ಶಿವ. ಅದಕ್ಕೆ ಪಾರ್ವತಿ, "ಪ್ರಭೂ, ನನ್ನ ಶರೀರ ನಾಶವಾಗುವಂಥದು. ಅದು ಸಾಯುತ್ತದೆ. ಆದರೆ ನೀನು ಮಾತ್ರ ಅಮರ. ಇದಕ್ಕೇನು ಕಾರಣ, ದಯವಿಟ್ಟು ತಿಳಿಸು" ಎಂದು ಕೇಳಿಕೊಳ್ಳುತ್ತಾಳೆ. ಶ್ರೀಶಂಕರನು ಈ ರಹಸ್ಯದ ಕಾರಣವಾದ ಅಮರಕಥೆಯನ್ನು ಹೇಳಲು ಹಿಂಜರಿಯುತ್ತಾನೆ. ಆದರೆ ಪಾರ್ವತಿ ಬಿಡುವುದಿಲ್ಲ. ಬಹಳ ವರ್ಷಗಳ ಕಾಲ ಹಠ ಮಾಡುತ್ತಾಳೆ. ಅಮರಕಥೆಯನ್ನು ಹೇಳುವ ಸಮಯದಲ್ಲಿ ಪಕ್ಕದಲ್ಲಿ ಬೇರಾವ ಜೀವಿಯೂ ಇರಬಾರದು. ಅಂತಹ ನಿರ್ಜನ ಸ್ಥಳವನ್ನು ಹುಡುಕಿಕೊಂಡು ಶಂಕರನು ಪಾರ್ವತಿಯ ಸಂಗಡ ಈ ಪರ್ವತ ಪ್ರದೇಶಕ್ಕೆ ಬರುತ್ತಾನೆ. ಪಹಲ್‌ಗಾಂವ್‌ನಿಂದ ತನ್ನ ಪ್ರಯಾಣ ಆರಂಭಿಸಿ, ಹಿಂದೆ ಹೇಳಿದ ಹಾಗೆ, ಬೇರೆಬೇರೆ ಸ್ಥಳಗಳಲ್ಲಿ ತನ್ನ ಬೇರೆ ಬೇರೆ ಅನುಚರರನ್ನು ತ್ಯಜಿಸುತ್ತಾನೆ. ಪಂಚತರಣಿಯಲ್ಲಿ ಪಂಚ ಮಹಾಭೂತಗಳನ್ನೇ ತ್ಯಜಿಸಿಬಿಡುತ್ತಾನೆ. ಎಲ್ಲವನ್ನೂ ತ್ಯಾಗಮಾಡಿದ ಭಗವಾನ್ ಶಿವನು ಪಾರ್ವತಿಯೊಡನೆ ಈ ಪವಿತ್ರ ಗುಹೆಯನ್ನು ಪ್ರವೇಶಿಸುತ್ತಾನೆ.

## ಶ್ರೀ ಅಮರನಾಥ ದರ್ಶನ

ಸುಮಾರು ಎರಡು ಗಂಟೆಯ ಕಾಲ ಕಾದರೂ ಪವಿತ್ರ ಲಿಂಗದ ಮುಂದಿರುವ ಚಿಕ್ಕ ಗೇಟಿನ ತನಕ ಮಾತ್ರ ನಾವೀಗ ಬಂದಿದ್ದೇವೆ. ನಮಗೂ ಅಮರನಾಥನಿಗೂ ಕೇವಲ ಕೆಲವೇ ಅಡಿಗಳ ಅಂತರ. ಆದರೂ ಆತನ ದರ್ಶನಭಾಗ್ಯ ಸಿಕ್ಕುತ್ತಿಲ್ಲ. ಕಾರಣ ವಿಪರೀತ ಜನಜಂಗುಳಿ, ನೂಕುನುಗ್ಗಲು ಮತ್ತು ಅಸಹಾಯಕರಾದ ಸೈನಿಕ ಪಹರೆಯ ಜನ. ಅನಂತಕಾಲವೇನೋ ಎನ್ನುವಂತಿದ್ದ ಆ ಸಂದಿಗ್ಧ ಸಮಯದಲ್ಲಿ ಜನ ತಾಳ್ಮೆ ಕಳೆದುಕೊಂಡು ಕಿತ್ತಾಡಲಾರಂಭಿಸಿದರು. ಅದೋ, ಗೇಟು ಸ್ವಲ್ಪ ತೆರೆಯಿತು. ಜನ ನುಗ್ಗುತ್ತಿದ್ದರು. ನನಗೆ ಅರಿವಿಲ್ಲದೆ ನಾನೂ ಮುಂದಕ್ಕೆ ನೂಕಲ್ಪಟ್ಟೆ. ಸಾವರಿಸಿಕೊಂಡು ಅತ್ತಿತ್ತ ನೋಡಿದರೆ, ಅಮರನಾಥ ಶಿವನ ಮುಂದೆಯೇ ನಿಂತಿದ್ದೆ.

ಎಂಥ ಅದ್ಭುತ ದೃಶ್ಯ! ಒಂದು ಮೂಲೆಯಲ್ಲಿ, ಎತ್ತರದ ಜಾಗದಲ್ಲಿ, ಹತ್ತು ಅಡಿಗಳಿಗೂ ಎತ್ತರದ ಸ್ವಯಂಭೂ ಹಿಮಲಿಂಗ ರಾರಾಜಿಸುತ್ತಿದೆ! ಅದರ ಕೆಳಗಿರುವ ದೊಡ್ಡ ಪೀಠವೂ ಹಿಮದ್ದೇ. ಶುಭ್ರಶ್ವೇತವರ್ಣದ ಪವಿತ್ರಲಿಂಗ ಗುಹೆಯ ಗೋಡೆಗೆ ಅಂಟಿಕೊಂಡೇ ಇದೆ. ಅದರ ಮೇಲೆಲ್ಲ ಬಿಲ್ವಪತ್ರೆ, ಹೂಗಳು ಅಲಂಕಾರದ ಆಭರಣಗಳಂತೆ ಹೊಳೆಯುತ್ತಿದ್ದವು. ಅದು ಹೇಗೆ ರೂಪುಗೊಂಡಿತೋ, ಸರಿಯಾಗಿ ಅದೇ ಜಾಗದಲ್ಲಿ ಪ್ರತಿ ಬಾರಿಯೂ ಹೇಗೆ ರೂಪುಗೊಳ್ಳುತ್ತದೆಯೋ ಆ ಭಗವಾನ್ ಶಿವನಿಗೇ ಗೊತ್ತು. ಭಗವಾನ್ ಅಮರನಾಥನ ದರ್ಶನ ಪಡೆದ ಭಕ್ತರ ಮನಸ್ಸಿನಲ್ಲಿ ಸಂತೃಪ್ತಿಯ ಮತ್ತು ಸಫಲತೆಯ ಭಾವನೆ ಉಕ್ಕುತ್ತದೆ. ಆ ಮುಹೂರ್ತದಲ್ಲಿ ಕಷ್ಟಕಾರ್ಪಣ್ಯವೆಲ್ಲ ಮರೆತುಹೋಗುತ್ತದೆ. ಅದ್ಭುತವಾದ ಆಶ್ಚರ್ಯಕರವಾದ ಒಂದು ಸಂಗತಿಯನ್ನು ಕಂಡಂತೆ ಮನ ವಿಸ್ಮಯಗೊಳ್ಳುತ್ತದೆ. ಅಪೂರ್ವವಾದ ರೀತಿಯಲ್ಲಿ ಪ್ರಕಾಶಗೊಳ್ಳುತ್ತಿರುವ ಭಗವತ್‌ಚೈತನ್ಯದ ದಿವ್ಯಲೀಲೆಗೆ ತನುಮನಗಳು ಬಾಗುತ್ತವೆ. ೧೯೯೨ರಲ್ಲಿ ಮಾತ್ರ ಇಷ್ಟು ಎತ್ತರದ ಲಿಂಗ ಕಾಣಿಸಿಕೊಂಡಿತ್ತಂತೆ. ಅಲ್ಲಿಂದ ಈಚೆಗೆ ಇದೇ ಪ್ರಪ್ರಥಮಬಾರಿಗೆ ಸುಮಾರು ಹತ್ತೂವರೆ ಅಡಿ ಎತ್ತರದ ಅಮರನಾಥ ಲಿಂಗ ಈ ವರ್ಷವಷ್ಟೆ,



ರೂಪುಗೊಂಡಿದೆ. ಇದು ನಮ್ಮ ಸುದೈವವಲ್ಲದೆ ಮತ್ತಿನ್ನೇನು ಎಂದು ಯೋಚಿಸುತ್ತ ಪುಳಕಿತಗೊಂಡೆವು.

ಸ್ವಾಮಿ ವಿವೇಕಾನಂದರು ೧೮೯೮ರ ಆಗಸ್ಟ್ ಮೊದಲ ವಾರದಲ್ಲಿ ಅಮರನಾಥ ಯಾತ್ರೆಯನ್ನು ಮಾಡಿದ್ದರು. ಆಗಸ್ಟ್ ೨ನೆಯ ತಾರೀಖು ಸ್ವಾಮೀಜಿ ಭಸ್ಮಭೂಷಿತರಾಗಿ, ಕೇವಲ ಕೌಪೀನಧಾರಿಯಾಗಿ ಅಮರನಾಥ ಗುಹೆಯನ್ನು ಪ್ರವೇಶಿಸಿದರು. ಆ ಸಮಯದಲ್ಲಿ ಅವರ ಮುಖ ಶಿವಭಾವದಿಂದ ಪ್ರಜ್ವಲಿಸುತ್ತಿತ್ತು. ಅಮರನಾಥನ ಎದುರು ಸಾಷ್ಟಾಂಗ ಪ್ರಣಾಮ ಮಾಡಿದ ಸ್ವಾಮೀಜಿ, ನೂರು ಕಂಠಗಳು ಸೇರಿವೆಯೇನೋ ಎನ್ನುವಂತಹ, ಗುಹೆಯಲ್ಲಿ ಎಲ್ಲೆಲ್ಲೂ ಪ್ರತಿಧ್ವನಿಸುತ್ತಿದ್ದ ಗಂಭೀರ ದನಿಯಲ್ಲಿ ಶಿವಸ್ತುತಿಯನ್ನು ಮಾಡಿದರು. ಆ ಮಹಾ ಹಿಮಲಿಂಗದ ಉಜ್ವಲ ಪಾವಿತ್ರ್ಯ ಅವರ ಮೇಲೆ ಅಪೂರ್ವ ಪ್ರಭಾವ ಬೀರಿತು. ಅವರು ಭಾವಾವೇಶದಿಂದ, ಪ್ರಜ್ಞೆತಪ್ಪಿದವರಂತೆ ಆಗಿಬಿಟ್ಟರು. ಒಂದು ಬಗೆಯ ಅತ್ಯಂತ ಗಾಢವಾದ ಆಧ್ಯಾತ್ಮಿಕ ಅನುಭವ ಅವರಿಗೆ ಅಲ್ಲಿ ಉಂಟಾಯಿತು. ಅದರ ಬಗ್ಗೆ ಯಾರ ಒಡನೆಯೂ ಅವರು ಮಾತನಾಡಲಿಲ್ಲ. ಆದರೆ ಇಷ್ಟನ್ನು ಮಾತ್ರ ಹೇಳಿದರು: "ಭಗವಾನ್ ಶಿವನೇ ನನ್ನ ಎದುರಿಗೆ ಕಾಣಿಸಿಕೊಂಡನು. ಆ ಅಮರನಾಥನು ನನ್ನ ಇಚ್ಛೆಯ ಪ್ರಕಾರ ಮರಣಹೊಂದುವ ಅವಕಾಶವನ್ನು ನನಗೆ ಅನುಗ್ರಹಿಸಿದನು." ಸ್ವಾಮೀಜಿ ಇನ್ನಾವ ತೀರ್ಥಕ್ಷೇತ್ರದಲ್ಲಿಯೂ ಈ ಬಗೆಯ ಅಪೂರ್ವ ಅನುಭವವನ್ನು ಪಡೆದಿರಲಿಲ್ಲ. ಅದಕ್ಕೆ ಕಾರಣವನ್ನು ಅವರೇ ಹೇಳುತ್ತಾರೆ: "ವಿಗ್ರಹವೆಂಬುದು ಭಗವಂತನೇ ಸರಿ. ಅಲ್ಲಿ ನಾನು ಅನುಭವಿಸಿದ್ದೆಲ್ಲ ಆತನ ಪ್ರತ್ಯಕ್ಷ ಪೂಜೆಯೇ. ಇಷ್ಟೊಂದು ಸೌಂದರ್ಯದಿಂದ ಕೂಡಿದ, ಇಷ್ಟೊಂದು ಸ್ಫೂರ್ತಿಯುತವಾದ ಸ್ಥಳಕ್ಕೆ ನಾನೆಂದೂ ಹೋಗಿರಲಿಲ್ಲ." ಹೀಗೆ ಅಮರನಾಥ ದರ್ಶನವು ಸ್ವಾಮೀಜಿಯವರ ಬಾಳಿನಲ್ಲಿ ಅಚ್ಚಳಿಯದ ಆಧ್ಯಾತ್ಮಿಕ ಅನುಭವವನ್ನು ತಂದುಕೊಟ್ಟಿತು.

ಅಮರನಾಥಯಾತ್ರೆಯು ಪ್ರತಿ ವರ್ಷ ಆಷಾಢ ಪೂರ್ಣಿಮೆ, ಅಥವಾ ವ್ಯಾಸಪೂರ್ಣಿಮೆಯಿಂದ ಆರಂಭವಾಗುತ್ತದೆ. ಒಂದು ತಿಂಗಳ ಕಾಲ ಅಂದರೆ, ಶ್ರಾವಣ ಪೂರ್ಣಿಮೆಯ ತನಕ ನಡೆಯುತ್ತದೆ. ಶ್ರಾವಣ ಪೂರ್ಣಿಮೆಯನ್ನು ರಕ್ಷಾ ಬಂಧನವೆಂದು ಎಲ್ಲೆಲ್ಲೂ ಆಚರಿಸುತ್ತಾರೆ. ಅದಕ್ಕೆ ಮೂರು ದಿನ ಹಿಂದೆ, ಶ್ರೀನಗರದಿಂದ, ಸಾಧುಗಳು ಮೆರವಣಿಗೆಯಲ್ಲಿ ಅಮರನಾಥಕ್ಕೆ ಹೋಗುತ್ತಾರೆ. ಇದರಲ್ಲಿ ಸಾವಿರಾರು ಜನ ಭಾಗವಹಿಸುತ್ತಾರೆ. ಭಗವಾನ್ ಶಿವನ ದಂಡವೊಂದನ್ನು ಅಲಂಕರಿಸಿ ಕೊಂಡೊಯ್ಯುತ್ತಾರೆ. ಇದನ್ನು *ಛಡಿ ಮುಬಾರಕ್* ಎನ್ನುತ್ತಾರೆ. ಶ್ರಾವಣ ಪೂರ್ಣಿಮೆಯಂದು ಪವಿತ್ರ ಗುಹೆಯನ್ನು ತಲುಪಿ, ಇದನ್ನು ಶಿವನಿಗೆ ಸಮರ್ಪಿಸಿ, ಪೂಜಿಸುತ್ತಾರೆ. ಇಲ್ಲಿಗೆ ಆ ವರ್ಷದ ಯಾತ್ರೆ ಸಂಪನ್ನವಾಗುತ್ತದೆ.

ದರ್ಶನ ಮುಗಿಸಿ ಕೆಳಗಿಳಿದು ಬಂದಾಗ ಮಧ್ಯಾಹ್ನ ಮೂರು ಗಂಟೆ. ರಾತ್ರಿ ವಿಶ್ರಮಿಸಿ, ಮರುದಿನ ಬೆಳಗ್ಗೆ ೫ ಗಂಟೆಗೆ ತಿರುಗಿ ದರ್ಶನಕ್ಕೆ ಹೋದೆವು. ಅಷ್ಟೊತ್ತಿಗೆ ಆಗಲೇ ನೂರಾರು ಜನ ಜಮಾಯಿಸಿದ್ದರು. ಅಂದು *ಶ್ರೀಗುರು ಪೂರ್ಣಿಮೆಯ* ಪರ್ವದಿನ. ಅಂದಿನ ದಿನವೂ ಶ್ರೀ ಅಮರನಾಥನ ದರ್ಶನಭಾಗ್ಯ ಪಡೆದು ಧನ್ಯರಾದೆವು. ಕೆಳಕ್ಕೆ ಬಂದು, ಸಾಮಾನು ಹೊತ್ತುಕೊಂಡು, ಇನ್ನೊಂದು ಹತ್ತಿರದ ಮಾರ್ಗದಲ್ಲಿ ನಡೆದು ಮಧ್ಯಾಹ್ನ ೩.೩೦ಕ್ಕೆ ಬಾಲ್ತಾಲ್ ಎಂಬ ಊರನ್ನು ತಲುಪಿದೆವು. ಅಲ್ಲಿಂದ ಬಸ್ಸು ಹಿಡಿದು ಶ್ರೀನಗರಕ್ಕೆ ಬರುವ ಹೊತ್ತಿಗೆ ರಾತ್ರಿ ೮ ಗಂಟೆ. ಅಲ್ಲಿನ ಶ್ರೀರಾಮಕೃಷ್ಣ ಆಶ್ರಮವನ್ನು ತಲುಪಿದಾಗ, ಈಗಾಗಲೇ ಯಾತ್ರೆ ಮುಗಿಸಿಕೊಂಡು ಬಂದಿದ್ದ ರಾಮಕೃಷ್ಣ ಮಿಷನ್ನಿನ ಹಲವಾರು ಸ್ವಾಮಿಗಳು ಕಂಡುಬಂದರು. ಅವರೆಲ್ಲರೊಂದಿಗೆ, ಆನಂದದಿಂದ ಯಾತ್ರೆಯ ಅನುಭವವನ್ನು ಹಂಚಿಕೊಂಡು, ಊಟ ಮಾಡಿ, ಮಲಗಿದೆವು. ಅಂದಿನ ರಾತ್ರಿಯ ನಿದ್ರೆ ಗಾಢವಾಗಿತ್ತು, ನೆಮ್ಮದಿಯಿಂದ ಕೂಡಿತ್ತು. ಏಕೆಂದರೆ ಅಂದು ನಮ್ಮ ಯಾತ್ರೆ ಸಫಲವಾಗಿ ಸಂಪನ್ನಗೊಂಡಿತ್ತು. ಭಗವಾನ್ ಅಮರನಾಥನ ದರ್ಶನಭಾಗ್ಯ ನಮಗೆ ದೊರೆತಿತ್ತು. ❖